ಕತೆ ಹೇಳಿದ್ರಂತೆ. ಆ ದೈವ ಅಷ್ಟು ಕಾರ್ನಿಕದ್ದು ಅಂತ ಊರವರಿಗೆ ಗೊತ್ತಾಗಿದ್ದೇ ಆ ನಂತರವಂತೆ. ಅದು ನಿಜವಾಗಿ ನಡೆದ ಕತೆಯಂತೆ.

ದೇವಪ್ಪ ಶೆಟ್ರು, ಅವರಜ್ಜನ ಅಪ್ಪನಿಗೆ ಅವರ ತಾಯಿ ಹೇಳಿದ್ದ ಕತಾಪಿಂಡಿಯನ್ನು ಪೂವ ಮರಕಾಲನ ಎದುರು ಬಿಚ್ಚುವಷ್ಟರಲ್ಲಿ ಅವರಿರುವಲ್ಲಿಗೇ ಆಚಾರಿ ಕೊಟ್ಯದ ಶ್ರೀಧರಾಚಾರಿಯು ಬರುತ್ತಿರುವುದನ್ನು ಕಂಡು, ಪಟೇಲರು ಕತಾ ಎಳೆಯನ್ನು ಒಂದರೆ ಗಳಿಗೆ ಜಗ್ಗಿ ನಿಲ್ಲಿಸಿ, ಕೈ ಭಾಷೆಯಲ್ಲೇ ಆತನನ್ನು ಕರೆಯುತ್ತಾ ಮತ್ತೆ ತನ್ನ ಕತೆಯನ್ನು ಮುಂದುವರಿಸಿದ್ದರು. ಈ ಕತೆಯು ಸದ್ಯಕ್ಕೆ ಮುಗಿಯುವಂತದ್ದಲ್ಲ ಎಂದು ಭಾವಿಸಿದವನೇ ಪೂವ ಮರಕಾಲ ಅಲ್ಲೇ ಇದ್ದ ಅರಳಿ ಕಟ್ಟೆಯತ್ತ ಕೈ ತೋರಿಸಿ, 'ಬನ್ನಿ ಎಲ್ಲರೂ ಅಲ್ಲೇ ಒಂದು ಗಳಿಗೆ ಕೂತುಕೊಂಡು... ಕಾಲಿಗೊಂದು ಉಸಿರು ಕೊಡುವ' ಎಂದು ಹೇಳಿ ಕುಳಿತೇಬಿಟ್ಟ. 'ನೀನು ಕೂತುಕೋ ಮಾರಾಯ... ನಾನು ಈ ಕತೆ ಮುಗಿಸಿ, ನಮ್ಮ ಶ್ರೀಧರಾಚಾರಿ ಜೊತೆಗೆ ವಾಸುತಂತ್ರಿಗಳ ಹಿತ್ಲಿಗೆ ಹೋಗಿಬರ್ಬೇಕು' ಎಂದು ಅಂದವರೇ, ಮತ್ತೆ ಶೆಟ್ಟರು ತನ್ನ ಕತೆಯನ್ನು ಮುಂದುವರಿಸಿದ್ದರು. ಪಟೇಲರ ಆ ಕತೆಗೆ ಶ್ರೀಧರಾಚಾರಿಯೂ ಕಿವಿಯಾದ.

'...ನಮ್ಮ ಈ ಧೂಮಾವತಿ ದೈವ ಎಷ್ಟು ಕಾರ್ನಿಕದ್ದು ಅಂದ್ರೆ, ಒಂದು ದಿನ ನನ್ನ ಅಂದರೆ ಅಜ್ಜನ ಮುತ್ತಜ್ಜನ ಕಾಲದಲ್ಲಿ ಫಲ್ಗುಣಿ ನದಿಯು ಭರ್ತಿ ತುಂಬಿದ ಕಾಲವಂತೆ; ಮಾರ್ನಮಿ ಹಬ್ಬದ ಸಮಯ. ಕುಡಾಲದ(ಮಂಗಳೂರು) ಕಡೆಯಿಂದ ನಮ್ಮೂರಿಗೆ ಯಾರಾದರೂ ಬರಬೇಕಾದರೆ ಕೂಳೂರು ನದಿಯ ದಡದಲ್ಲೇ ಮೂಡ್ಲಾಗೆ ನಡೆದು...ಆನಂತರ ಆ ಕಡೆಯ ನದಿಕಡಪು ದಾಟಿದ್ರೆ... ಈ ದಡದಲ್ಲಿರುದು ನಮ್ಮೂರು. ಹಗಲಿಡೀ... ದೇವರು ಕಂತುವವರೆಗೂ ಕಡಪು ದಾಟಿಸುದಕ್ಕೆ ಆ ದಡ ಈ ದಡದಲ್ಲಿ ಐದಾರು ಬ್ಯಾರಿಗಳ ಕುಟುಂಬಗಳು ಇದ್ದುವಂತೆ. ಸಾಮಾನ್ಯವಾಗಿ ಕತ್ತಲಾದ ನಂತರದಲ್ಲಿ ಆಗ ಯಾವ ಓಡವೂ ನೀರಿಗಿಳಿಯುತ್ತಿರಲಿಲ್ಲವಂತೆ. ಊರವರಿಗೆ ಅಗತ್ಯ ಬಿದ್ದಲ್ಲಿ ಆ ಬ್ಯಾರಿಗಳ ಮನೆಯಂಗಳಕ್ಕೆ ಹೋಗಿ ಕೇಳಿಕೊಂಡಲ್ಲಿ ಅವರು ತಮ್ಮ ದೋಣಿಗಳನ್ನು ನೀರಿಗಿಳಿಸುತ್ತಿದ್ದರು; ಇಲ್ಲವೆಂದಿಲ್ಲ.

...ಹೀಗೆ ನದಿ ತುಂಬಿದ್ದ ಆ ಒಂದು ದಿನ, ಒಬ್ಬ ಪರಂಗಿ ಸಾಯಿಬ ಕುಡಾಲದ ತನ್ನ ಬಂಗಲೆಯಿಂದ ನಮ್ಮೂರತ್ತ ಕುದುರೆ ಮೇಲೆ ಹೊರಟಿದ್ದನಂತೆ. ಅಂವ ಹೆಣ್ಣಿನ ಛಂಗಯಿಗಂತ ಹೊರಟವ. ಹಾಗೇ ಕುದುರೆ ಮೇಲೆ ಹೊರಟವ ಕೂಳೂರ ನದಿದಂಡೆಯಲ್ಲೇ ಬಂದು, ನಮ್ಮೂರಿಗೆ ಬರುವ ಕಡಪಿನತ್ತ ಬರುವಷ್ಟರಲ್ಲಿ ನಸುಗತ್ತಲು ಬಲಿತು ಕರುಕತ್ತಲಾಗಿದೆ! ಆತ ನಿಂತಿರುವ ದಡದಲ್ಲಿ ಒಂದೇ ಒಂದು ದೋಣಿಯಿಲ್ಲ. ಕೆಂಪು ದೊರೆ... ಆಚೆ ನೋಡಿದ, ಈಚೆ ನೋಡಿದ. ಕುಡಾಲದ ಕಡೆ ಬೆಳಿಗ್ಗೆ ಹೋಗಿದ್ದ ದೋಣಿಗಳು ಕೂಡಾ ಆ ಕತ್ತಲಲ್ಲಿ ಸೀದಾ ಅತ್ತ... ಮೂಡ್ಲಾಗಿನತ್ತ ಹೋಗ್ತಿವೆ! ಅವರನ್ನು ಇಂವ... ಈತನ ಪರಂಗಿ ಭಾಸೆಯಲ್ಲಿ ಕರೀತಾನೆ... ಯಾರಿಗೂ ಕೇಳಿಸ್ತಿಲ್ಲ! ಅಥವ ಕೇಳಿಸ್ತಿದ್ರೂ ಕೇಳದವರಂತೆ ಹೋಗ್ತಿದ್ದಾರೆ. ಆತ ಆಗಲೇ ತುಂಬ ಸಲ ಆ ನದಿ ದಾಟಿ ನಮ್ಮೂರಿಗೆ ಬಂದವನಂತೆ. ಆಗ ನಮ್ಮೂರಲ್ಲಿದ್ದ ಮೂಲೋಕ ಸುಂದರಿ ಸೂಳೆಸಿದ್ದು ಅಂದ್ರೆ ಅವನಿಗೆ ಬಾಳ ಜೀವವಂತೆ. ಅವನಿಗೆ ಇವಳ ಚಂಗಯಿ ಆಗಿದ್ದು ಹೇಗಂತಂದ್ರೆ... ಒಮ್ಮೆ ಆ ದೊರೆ ನಮ್ಮ ನದಿಯಾಗಿಯೇ ಕುದ್ರೋಳಿಯಿಂದ ಪುರಾಲ್(ಪೊಳಲಿ) ಕಡೆ ಹೊರಟಿದ್ನಂತೆ, ಅಂದು ಅದೇ ದೋಣಿಯಲ್ಲಿ ಆ ಸಿದ್ದುವೂ ಪುರಾಲ್ ದೇವಸ್ಥಾನಕ್ಕೆ ಹೊರಟಿದ್ಲಂತೆ. ದೇಸ ಇಲ್ಲ ಭಾಸೆ ಇಲ್ಲ... ಬರೀ ಕಣ್ಣುನಗುವಿನ ಭಾಸೆಯಲ್ಲೇ ಇಬ್ಬರಿಗೂ ಚಂಗಯಿ ಸುರುವಾಯ್ತಂತೆ. ಸುರುವಂದ್ರೆ ಸುರುವೆ... ಊರವರು ನೋಡಿದ್ದೇ